**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೨೬.೦೫.೨೦೧೩ರಂದು ನಡೆದ ಪ್ರಶಾಸನ ಸಮಿತಿ ೧೪ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೧೪ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಮೇ ೨೬, ೨೦೧೩ರ ಭಾನುವಾರ ಬೆಳಿಗ್ಗೆ ೦೯.೩೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೬. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೭. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |
| ೮. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೯. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೦. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

### ವಿಷಯ 1: ಪ್ರಶಾಸನ ಸಮಿತಿ ಹದಿಮೂರನೇ ಸಭೆಯ ಅನುಪಾಲನಾ ವರದಿ.

ಟಿಪ್ಪಣಿ: ದಿನಾಂಕ: 28.03.2013ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಹದಿಮೂರನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಘನತೆವೆತ್ತ ರಾಜ್ಯಪಾಲರಿಗೆ ಪತ್ರವನ್ನು ಬರೆದು ಒಪ್ಪಿಗೆಯನ್ನು ಪಡೆಯಲಾಗಿದೆ. ಈ ಸಮಾರಂಭದಲ್ಲಿ ಭಾಗವಹಿಸಿ ಗೌರವ ಡಿ.ಲಿಟ್ ಸ್ವೀಕರಿಸುವಂತೆ ಕೋರಿ ನಾಲ್ವರು ಹಿರಿಯ ವಿದ್ವಾಂಸರಿಗೆ ಮತ್ತು ದೀಕ್ಷಾಂತ ಘಟಿಕೋತ್ಸವ ಭಾಷಣವನ್ನು ಮಾಡುವಂತೆ ಕೋರಿ ಪತ್ರವನ್ನು ಬರೆಯಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಪರಿಶೀಲಿಸಿ ತನ್ನ ಒಪ್ಪಿಗೆಯನ್ನು ನೀಡಿತು.**

### ವಿಷಯ 2: 27.04.2013ರಂದು ನಡೆದ ಪ್ರಶಿಕ್ಷಣ ಪರಿಷತ್ತು ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.

ಟಿಪ್ಪಣಿ: ಪ್ರಶಿಕ್ಷಣ ಪರಿಷತ್ತಿನ ಏಳನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 27.04.2013ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಶಿಕ್ಷಣ ಪರಿಷತ್ತಿನ ಏಳನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 3: 08.05.2013ರಂದು ನಡೆಯುವ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ ಹತ್ತನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 08.05.2013ರಂದು ನಡೆಯಲಿದೆ. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗುವುದು.

ನಿರ್ಣಯ: **ಸಭೆಯು ಹಣಕಾಸು ಸಮಿತಿಯ ಹತ್ತನೇ ಸಭೆಯ ನಡಾವಳಿಯನ್ನು, ಮೂರು ತಿಂಗಳ ಆಯವ್ಯಯ ಮತ್ತು 2013–14ನೇ ಸಾಲಿನ ಕ್ರಿಯಾಯೋಜನೆಯನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 4: ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ಹುದ್ದೆಯ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈಗಾಗಲೇ ಸೃಜನೆಗೊಂಡಿರುವ ಒಟ್ಟು **133 ಬೋಧಕ–ಬೋಧಕೇತರ ಹುದ್ದೆ**ಗಳ ಪೈಕಿ 2012–13ನೇ ಸಾಲಿನಲ್ಲಿ ಮೊದಲ ಹಂತವಾಗಿ ರಾಜ್ಯ ವೇತನಶ್ರೇಣಿಯ 37 ಬೋಧಕ–ಬೋಧಕೇತರ ಹುದ್ದೆಗಳು ಮತ್ತು ಯುಜಿಸಿ ವೇತನಶ್ರೇಣಿಯ 03 ಬೋಧಕ (ಪ್ರಾಧ್ಯಾಪಕ) ಹುದ್ದೆಯನ್ನು ತುಂಬಿಕೊಳ್ಳುವ ಪ್ರಕ್ರಿಯೆಯು ಚಾಲ್ತಿಯಲ್ಲಿದೆ. ಅಂತೆಯೇ 2013–14ನೇ ಸಾಲಿನಲ್ಲಿ ಯುಜಿಸಿ ವೇತನಶ್ರೇಣಿಯ 18 ಬೋಧಕ ಹುದ್ದೆಗಳು (ಸಹಪ್ರಾಧ್ಯಾಪಕರು–06; ಸಹಾಯಕ ಪ್ರಾಧ್ಯಾಪಕರು–12) ಮತ್ತು ಯುಜಿಸಿ ವೇತನಶ್ರೇಣಿಯ ಬೋಧಕೇತರ–01 (ಗ್ರಂಥಪಾಲಕ) ಹುದ್ದೆಯನ್ನು ಭರ್ತಿ ಮಾಡಿಕೊಳ್ಳಬೇಕಾಗಿದ್ದು, ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ಹುದ್ದೆಯ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿ ನಿಯಮಾನುಸಾರ ಅಧಿಸೂಚನೆ ಹೊರಡಿಸಲು ಅನುಮೋದಿಸಿತು.**

**ವಿಷಯ 5: ವಿಶ್ವವಿದ್ಯಾಲಯದ ಅಧೀನವಾಗಿ ಸಂಜೆ ಕಾಲೇಜನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಸಂಸ್ಕೃತವನ್ನು ಭಾಷೆಯನ್ನಾಗಿ ಅಲ್ಲದೇ ಪಾರಂಪರಿಕ ಸಂಸ್ಕೃತ ಶಾಸ್ತ್ರಾಭ್ಯಾಸ ಮಾಡಬಯಸುವ ಜಿಜ್ಞಾಸುಗಳಿಗೆ ಮತ್ತು ಸಂಶೋಧಕರಿಗೆ ಅಧ್ಯಯನ ಅವಕಾಶಗಳನ್ನು ಕಲ್ಪಿಸುವುದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶಗಳಲ್ಲಿ ಒಂದು. ಈಗಾಗಲೇ ಅನುದಾನ ಸಹಿತವಾಗಿ ಸಂಯೋಜನೆಗೊಂಡ ಸಂಸ್ಕೃತ ಕಾಲೇಜುಗಳಲ್ಲದೇ 10 ಹೊಸ ಅನುದಾನರಹಿತ ಕಾಲೇಜುಗಳು ಕಾರ್ಯಾರಂಭ ಮಾಡಿವೆ. ರಾಜ್ಯಾದ್ಯಾಂತ ಸಂಸ್ಕೃತ ಶಾಸ್ತ್ರಾಧ್ಯಯನಕ್ಕಾಗಿ ಹೊಸ ವಾತಾವರಣ ಮೂಡಿಸುವ ಹಿನ್ನೆಲೆಯಲ್ಲಿ ಈ ವಿಸ್ತರಣಾಕಾರ್ಯವನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಬೆಂಗಳೂರು ಮತ್ತು ಮೈಸೂರು ಈ ಎರಡು ಮಹಾನಗರಗಳಲ್ಲಿ ನಡೆಯುತ್ತಿದ್ದ ಸರಕಾರಿ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ವಿಲೀನಗೊಳಿಸಲಾಗಿದೆ. (ಈ ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗಳ ಸೇವಾ ವಿಲೀನೀಕರಣಕ್ಕೆ ಸಂಬಂಧಿಸಿದ ವಿಷಯವು ಈಗ ಸರಕಾರದ ಪರಿಶೀಲನೆಯಲ್ಲಿದೆ.) ವಿಶ್ವವಿದ್ಯಾಲಯವು ಸದ್ಯಕ್ಕೆ ಬೆಂಗಳೂರು ನಗರದ ಸಂಸ್ಕೃತ ಕಾಲೇಜಿನ ಆವರಣವನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಐ.ಟಿ.–ಬಿ.ಟಿ. ಹಾಗೂ ಇನ್ನಿತರ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವವರಲ್ಲಿ ಸಂಸ್ಕೃತ ಹಾಗೂ ಶಾಸ್ತ್ರಾಧ್ಯಯನದ ಬಗೆಗೆ ಸಾಕಷ್ಟು ಆಸಕ್ತಿ ಇದ್ದು, ಅವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ಬೇಡಿಕೆಗಳು ವಿಶ್ವವಿದ್ಯಾಲಯದ ಮುಂದೆ ಇವೆ. ಬೆಂಗಳೂರು ನಗರದ ಅನೇಕ ಬಡಾವಣೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತವನ್ನು ಪಾಠ ಮಾಡುತ್ತಿರುವ ಅನೇಕ ಅಧ್ಯಾಪಕರಿಗೆ ಉನ್ನತ ವಿದ್ಯಾಭ್ಯಾಸದಲ್ಲಿ ಅಭಿಲಾಷೆ ಇದ್ದರೂ ಅವಕಾಶಗಳು ದೊರಕುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಆಧ್ಯಾಯ2ರ ಪರಿಚ್ಛೇದ 4(4) ಮತ್ತು ಆಧ್ಯಾಯ 4ರ ಪರಿಚ್ಛೇದ 25(7)ರ ಪ್ರಶಿಕ್ಷಣ ಪರಿಷತ್ತಿಗೆ ದತ್ತವಾದ ಅಧಿಕಾರದ ಅಡಿಯಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಸಂಧ್ಯಾಕಾಲದ ಸಂಸ್ಕೃತ ಅಧ್ಯಯನ ಕೇಂದ್ರವನ್ನು (ಸಂಸ್ಕೃತ ಕಾಲೇಜು) ಆರಂಭಿಸಬೇಕೆಂಬ ಪ್ರಸ್ತಾವನೆಯನ್ನು ರೂಪಿಸಲಾಗಿದೆ. ಈ ಸಂಜೆ ಕಾಲೇಜು ಸಾಯಂಕಾಲ 4 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಕಾರ್ಯನಿರ್ವಹಿಸಿದಲ್ಲಿ ಉದ್ಯೋಗಿಗಳು, ಮಹಿಳೆಯರು, ಸ್ವಯಂ ಉದ್ಯೋಗಿಗಳು, ನಿವೃತ್ತರು ಈ ಅಧ್ಯಯನ ಕೇಂದ್ರದ ಲಾಭವನ್ನು ಪಡೆಯುತ್ತಾರೆ. ಈಗಿರುವ ಸಂಸ್ಕೃತ ಕಾಲೇಜಿನಲ್ಲಿಯೇ ಸಂಜೆ ಕಾಲೇಜನ್ನು ನಡೆಸಲು ಸ್ಥಳಾವಕಾಶ ಮಾಡಿಕೊಳ್ಳಬಹುದಾಗಿದೆ ಹಾಗೂ ವಿ.ವಿ. ಮತ್ತು ಕಾಲೇಜಿನಲ್ಲಿರುವ ಅಧ್ಯಾಪಕರ ಸೇವೆಯನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ವಿಶ್ವವಿದ್ಯಾಲಯದ ಸಂಜೆ ಕಾಲೇಜನ್ನು ನಡೆಸಬಹುದಾಗಿದೆ. ಈ ವಿಷಯವನ್ನು ದಿನಾಂಕ: 27.04.2013ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 7ನೇ ಸಭೆಯಲ್ಲಿ ಮಂಡಿಸಲಾಗಿದ್ದು, ಈ ವಿಷಯವಾಗಿ ಪ್ರಶಾಸನ ಸಮಿತಿ ಸಭೆಯಲ್ಲಿ ಚರ್ಚಿಸಿ ಸೂಕ್ತ ತೀರ್ಮಾನವನ್ನು ಕೈಗೊಳ್ಳಬಹುದೆಂದು ಅಭಿಪ್ರಾಯಿಸಿದೆ. ಈ ಹಿನ್ನೆಲೆಯಲ್ಲಿ ಸಂಜೆ ಕಾಲೇಜನ್ನು ಪ್ರಾರಂಭಿಸುವ ಬಗೆಗೆ ಚರ್ಚೆಗಾಗಿ ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯು ಮಾನ್ಯ ಕುಲಪತಿಗಳ ಅಭಿಪ್ರಾಯವನ್ನು ಕೂಲಂಕಷವಾಗಿ ಪರಿಶೀಲಿಸಿತು. ಸಂಸ್ಕೃತ ಶಿಕ್ಷಣ ಇತಿಹಾಸದಲ್ಲಿ ಇದೊಂದು ಹೊಸ ಮನ್ವಂತರದ ಕಾರ್ಯವೆಂದು ಅಭಿಪ್ರಾಯಪಟ್ಟಿತು. ಸಂಸ್ಕೃತ ಭಾಷೆ–ಸಾಹಿತ್ಯ–ಶಾಸ್ತ್ರಗಳಲ್ಲಿ ಪರಿಣತರಾದ, ಆಡಳಿತಾತ್ಮಕ ಅನುಭವವಿರುವ ನಿವೃತ್ತಿ ಹೊಂದಿರುವ ದಕ್ಷ ಪ್ರಾಂಶುಪಾಲರೊಬ್ಬರನ್ನು ನಿಯಮಾನುಸಾರ ನೇಮಕಾತಿ ಮಾಡಿಕೊಂಡು ಸಂಸ್ಕೃತ ಸಂಜೆ ಕಾಲೇಜನ್ನು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಆವರಣದಲ್ಲಿ 2013–14ನೇ ಸಾಲಿನಲ್ಲಿಯೇ ಪ್ರಾರಂಭಿಸಲು ಅನುಮೋದನೆ ನೀಡಿತು.**

**ವಿಷಯ 6: ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ದಿನಾಂಕ: 2013ರ ಮೇ 18ರಂದು ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿದ್ದ ರಾಜ್ಯ ವೇತನಶ್ರೇಣಿಯ ಬೋಧಕ **ಯೋಜನಾ**

**ಸಹಾಯಕ** ಹಾಗೂ ರಾಜ್ಯ ವೇತನಶ್ರೇಣಿಯ ಬೋಧಕೇತರ **ಗ್ರಂಥಾಲಯ ಸಹಾಯಕ, ವಿಶ್ರಾಂತಿಗೃಹ ಮೇಲ್ವಿಚಾರಕ ಮತ್ತು ಕಾವಲುಗಾರ** ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ರಾಜ್ಯ ವೇತನಶ್ರೇಣಿಯ ಬೋಧಕ 'ಯೋಜನಾ ಸಹಾಯಕ (ಶೈಕ್ಷಣಿಕ)' ಹುದ್ದೆ ಮತ್ತು ರಾಜ್ಯ ವೇತನಶ್ರೇಣಿಯ ಬೋಧಕೇತರ 'ಗ್ರಂಥಾಲಯ ಸಹಾಯಕ' ಹುದ್ದೆಗೆ ದಿನಾಂಕ: 18, ಮೇ 2013ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಸಭೆಯು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು. ಸಭೆಯಲ್ಲಿ ಉಪಸ್ಥಿತರಿದ್ದ ಡಾ. ಸಂತಪ್ಪನವರ ಪಿ.ಬಿ. ಅವರು ಯೋಜನಾ ಸಹಾಯಕ ಹುದ್ದೆಯ ನೇಮಕಾತಿಗೆ ತಮ್ಮ ಒಪ್ಪಿಗೆ ಇಲ್ಲವೆಂದು ತಿಳಿಸಿದರು. ಆದರೆ, ಉಳಿದ ಎಲ್ಲ ಸದಸ್ಯರು ಯೋಜನಾ ಸಹಾಯಕ ಹುದ್ದೆಗೆ ಆಯ್ಕೆಗೊಂಡಿರುವ ಅಭ್ಯರ್ಥಿಯು ಆ ಹುದ್ದೆಗೆ ಬೇಕಾಗುವ ಸಾಮರ್ಥ್ಯವನ್ನು ಹೊಂದಿರುವ ವಿಷಯವನ್ನು ಪರಿಗಣಿಸಿ ನೇಮಕಾತಿಗೆ ಒಪ್ಪಿಗೆ ನೀಡಿದರು ಹಾಗೂ ಗ್ರಂಥಾಲಯ ಸಹಾಯಕ ಹುದ್ದೆಗೆ ಆಯ್ಕೆಗೊಂಡಿರುವ ಅಭ್ಯರ್ಥಿಯು ಆ ಹುದ್ದೆಗೆ ಬೇಕಾಗಿರುವ ಸಾಮರ್ಥ್ಯವನ್ನು ಹೊಂದಿರುವ ವಿಷಯವನ್ನು ಪರಿಗಣಿಸಿ ನೇಮಕಾತಿಗೆ ಸಭೆಯು ಒಪ್ಪಿಗೆ ನೀಡಿತು. ವಿಶ್ರಾಂತಿಗೃಹ ಮೇಲ್ವಿಚಾರಕ ಮತ್ತು ಕಾವಲುಗಾರ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ದೊರಕದಿರುವುದರಿಂದ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

| ಕ್ರ.ಸಂ. | ಹುದ್ದೆಯ ಪದನಾಮ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| **01.** | ಯೋಜನಾ ಸಹಾಯಕ (ಶೈಕ್ಷಣಿಕ) | **ಶ್ರೀಮತಿ ಸಾವಿತ್ರಿ ಪೂಜಾರಿ**<br>ಪಿ.ಡಬ್ಲ್ಯು.ಡಿ. ಕ್ವಾಟರ್ಸ್, ಪೊಲೀಸ್ ಠಾಣೆ ಹತ್ತಿರ<br>ಚುಂಚನಕಟ್ಟೆ, ಕೆ.ಆರ್. ನಗರ, ಮೈಸೂರು ಜಿಲ್ಲೆ | ಪ್ರವರ್ಗ 2ಎ |
| **02.** | ಗ್ರಂಥಾಲಯ ಸಹಾಯಕ | **ಶ್ರೀ ಪ್ರಶಾಂತ ದಶರಥ ರಡರಟ್ಟಿ**<br>ಬಿನ್ ದಶರಥ ರಾಮಪ್ಪ ರಡರಟ್ಟಿ<br>ರಬಕವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | ಪರಿಶಿಷ್ಟ ಜಾತಿ |

**ವಿಷಯ 7: ಶ್ರೀ ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಮೈಸೂರು –ಈ ಪಾಠಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಎಂ. ಹೊನ್ನಪ್ಪ ಇವರ ನಿಧನದಿಂದ ತೆರವಾದ ಹುದ್ದೆಯನ್ನು ಅನುಕಂಪ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಶ್ರೀ ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಮೈಸೂರು –ಈ ಪಾಠಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಎಂ. ಹೊನ್ನಪ್ಪ ಇವರು ದಿನಾಂಕ: 27.05.2012ರಂದು ಮರಣ ಹೊಂದಿರುವುದರಿಂದ ಖಾಲಿಯಾದ ಹುದ್ದೆಯನ್ನು ಅನುಕಂಪ ಆಧಾರದ ಮೇಲೆ ಇವರ ಮಗಳಾದ ಕು॥ ಎಚ್. ಮಂಜುಶ್ರೀ –ಇವರಿಗೆ ನೀಡಲು ಆಡಳಿತ ಮಂಡಳಿಯು ಸರ್ಕಾರಿ ಆದೇಶ ಸಂಖ್ಯೆ: ಇಡಿ 98 ಎಸ್‌ಟಿಬಿ 1996; ದಿನಾಂಕ: 28.11.1998ರ ಅನ್ವಯ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಿರುವುದರಿಂದ ಒಪ್ಪಿಗೆ ನೀಡಿದೆ. ಅನುಕಂಪ ಆಧಾರದ ಮೇಲೆ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಗಳನ್ವಯ ನೇಮಕವನ್ನು ಮಾಡಿಕೊಳ್ಳಲಾಗಿದೆ. ಆಡಳಿತ ಮಂಡಳಿಯು ನೇಮಕಾತಿ ಪ್ರಾಧಿಕಾರವಾಗಿದ್ದು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನೇಮಕಾತಿ ಅನುಮೋದನೆ ಪ್ರಾಧಿಕಾರವಾಗಿರುತ್ತದೆ ನೇಮಕಾತಿಯನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರುತ್ತದೆ. ಸರ್ಕಾರಿ ಆದೇಶದ ಪ್ರಕಾರ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆ ನಡೆಸುವ ಆವಶ್ಯಕತೆಯಿರುವುದಿಲ್ಲ. ಕಂಡಿಕೆ ಸಂಖ್ಯೆ 23; ದಿನಾಂಕ: 10.04.2013ರ ಮಾನ್ಯ ಕುಲಪತಿಗಳ ಆದೇಶದಂತೆ ಪ್ರಸ್ತುತ ನೇಮಕಾತಿಯನ್ನು ಅನುಮೋದಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಕುಮಾರಿ ಎಚ್. ಮಂಜುಶ್ರೀ ಅವರನ್ನು ಅನುಕಂಪದ ಆಧಾರದ ಮೇಲೆ ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 100 SCA 95; ದಿನಾಂಕ: 12.09.1996ರ ಆದೇಶದಂತೆ ನೇಮಕ ಮಾಡಿಕೊಳ್ಳಲು ಒಪ್ಪಿಗೆ ನೀಡಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

**ವಿಷಯ 1: ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿನ ವಿದ್ಯಾರ್ಹತೆಯನ್ನು ತಿದ್ದುಪಡಿ ಮಾಡುವ ಬಗೆಗೆ.**

ಟಿಪ್ಪಣಿ: ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿ ವಿದ್ಯಾರ್ಹತೆಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ. ಆದರೆ, ಆ ನಿಯಮಗಳಂತೆ ಮೇಲ್ಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ದೊರೆಯದ ಹಿನ್ನೆಲೆಯಲ್ಲಿ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗೆ ನಿಗದಿಪಡಿಸಿದ PABX ತರಬೇತಿಯನ್ನು ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯು ನೀಡುತ್ತಿಲ್ಲದ ಕಾರಣ ಈ ಕೆಳಗಿನಂತೆ ವೃಂದ ಮತ್ತು ನೇಮಕಾತಿ ಪರಿನಿಯಮಕ್ಕೆ ತಿದ್ದುಪಡಿಯನ್ನು ಮಾಡಿ ಸರ್ಕಾರದಿಂದ ಅನುಮೋದನೆಯನ್ನು ಪಡೆಯಬಹುದಾಗಿದೆ.

| ಕ್ರ. ಸಂ. | ಹುದ್ದೆಯ ಪದನಾಮ ಮತ್ತು ವೇತನಶ್ರೇಣಿ | ಹುದ್ದೆಗಳ ಸಂಖ್ಯೆ | ಮೀಸಲಾತಿ ಬಿಂದು | ವೃಂದ ಮತ್ತು ನೇಮಕಾತಿ ನಿಯಮ | ಬದಲಾವಣೆ ಆಗಬೇಕಾದ ವಿವರ |
|---|---|---|---|---|---|
| 01 | ಕಂಪ್ಯೂಟರ್ ಆಪರೇಟರ್ ರೂ. 21600–40050 | 01 | ಮೀಸಲು ರಹಿತ | Must be a holder of I Class BE in Computer Science from a recognized University or Diploma in Computer Science awarded by Karnataka Technical Examination Board with 5 years experience in Data Entry or 5 years experience in the post of Computer. **Vidwath Degree in any Traditional System in the field of specialization.** | Must be a holder of I Class BE in Computer Science from a recognized University or Diploma in Computer Science awarded by Karnataka Technical Examination Board with 5 years experience in Data Entry or 5 years experience in the post of Computer**. Also passed Sanskrit Sahitya Pariksha in Traditional System.** |
| 02 | ಟೆಲಿಫೋನ್ ಆಪರೇಟರ್ ರೂ. 11600–21000 | 01 | ಪರಿಶಿಷ್ಟ ಜಾತಿ (ಅಂಗ ವಿಕಲ) | Must have passed SSLC or equivalent examination. **Should have studied Sanskrit Language in SSLC. Must have undergone training in PABX.** Preference given to physically challenged. | Must have passed SSLC or equivalent examination. **Should have studied Sanskrit Language in SSLC or passed in Samskrit Kavya examination. Must have 3 years experience in the post of Receptionist.** Preference given to physically challenged. |

ಮೇಲಿನಂತೆ ತಿದ್ದುಪಡಿಯನ್ನು ಮಾಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತಿದ್ದುಪಡಿ ಮಾಡಿದ ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗೆ ಬೇಕಾಗುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಒಪ್ಪಿಗೆ ನೀಡಿ, ವೃಂದ ಮತ್ತು ನೇಮಕಾತಿ ತಿದ್ದುಪಡಿಗೆ ಸರ್ಕಾರಕ್ಕೆ ಸಲ್ಲಿಸಿ ಕ್ರಮವಹಿಸಲು ಅನುಮೋದನೆ ನೀಡಿತು.**

**ವಿಷಯ 2: ಸತ್ಯಶೋಧನ ಸಮಿತಿ ವರದಿಯನ್ನು ಮಂಡಿಸುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿನಲ್ಲಿ ನಡೆದ ವಿದ್ವತ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಗಳ ಅಧ್ಯಾಪಕರುಗಳಿಂದ ಪ್ರಶ್ನಪತ್ರಿಕೆಗಳನ್ನು ಸಿದ್ಧಪಡಿಸಲಾಗಿತ್ತು. ಅವುಗಳಲ್ಲಿ ಎಂ.ಎ. ವಿದ್ವದುತ್ತಮಾ 2ನೇ ವರ್ಷದ ಅದ್ವೈತವೇದಾಂತ ಶಾಸ್ತ್ರದ ಪ್ರಶ್ನಪತ್ರಿಕೆ ಹಾಗೂ ಬಿ.ಎ. ವಿದ್ವನ್ಮಧ್ಯಮಾ 2ನೇ ವರ್ಷದ ವ್ಯಾಕರಣಶಾಸ್ತ್ರದ ಪ್ರಶ್ನಪತ್ರಿಕೆಯು ತಪ್ಪಾಗಿ ತಯಾರಾಗಿದ್ದು, ಪರೀಕ್ಷಾಮಂಡಳಿಯಲ್ಲೂ ಅದರ ನ್ಯೂನತೆಯನ್ನು ಸರಿಪಡಿಸದ ಕಾರಣ, ಇದರ ಸತ್ಯಾಸತ್ಯತೆಯನ್ನು ಪರಾಮರ್ಶಿಸಲು ಸತ್ಯಶೋಧನ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ 15.04.2013ರಂದು ಸಲ್ಲಿಸಿದ ಸತ್ಯಶೋಧನಾ ಸಮಿತಿಯ ಅಭಿಪ್ರಾಯಗಳು ಕೆಳಗಿನಂತಿವೆ. ಸಭೆಯ ಅವಗಾಹನೆಗೆ ಇರಿಸಿದೆ.

- ಅದ್ವೈತವೇದಾಂತಶಾಸ್ತ್ರ ಪ್ರಶ್ನೆಪತ್ರಿಕೆ ತಯಾರಿಸಿದ ವಿ. ಮಂಜುನಾಥ ಭಟ್ಟ ಮತ್ತು ವ್ಯಾಕರಣಶಾಸ್ತ್ರ ಪ್ರಶ್ನೆಪತ್ರಿಕೆ ತಯಾರಕರಾದ ಡಾ. ಪ್ರಭುಲಿಂಗ ಹೆಬ್ಬಾಳ, ತಮ್ಮ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ನಿಭಾಯಿಸದಿರುವುದು ಮೇಲುನೋಟಕ್ಕೆ ಕಂಡುಬರುತ್ತದೆ. ಜೊತೆಗೆ ಸಮಿತಿಯ ಮುಂದೆ ಹಾಜರಾಗದಿರುವುದು ಅವರ ಬೇಜವಾಬ್ದಾರಿಯನ್ನು ತೋರಿಸುತ್ತದೆ.
- BOE ಅಧ್ಯಕ್ಷರಾದ ಸೋ. ನರಸಿಂಹನ್ ಅವರೂ ಕೂಡಾ ಪ್ರಶ್ನೆಪತ್ರಿಕೆಯಲ್ಲಿನ ದೋಷ ಗಮನಕ್ಕೆ ಬಂದರೂ ಅದನ್ನು ಗಂಭೀರವಾಗಿ ಪರಿಗಣಿಸದೇ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿದ್ದರಿಂದ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾಲಯಕ್ಕೆ ತೊಂದರೆ ಹಾಗೂ ನಷ್ಟ ಉಂಟಾಗಿದೆ ಎಂದು ಸಮಿತಿಯು ಭಾವಿಸುತ್ತದೆ.
- ಪ್ರಶ್ನೆಪತ್ರಿಕೆಗಳು ನಿರ್ದೋಷವಾಗಿ ಸಿದ್ಧವಾಗಲು ಪರಿಶೀಲನಾ ಸಮಿತಿಗೆ ಸೂಕ್ತ ಸಮಯಾವಕಾಶವನ್ನು ನೀಡಲು ಸಮಿತಿಯು ವಿಶ್ವವಿದ್ಯಾಲಯಕ್ಕೆ ಸೂಚಿಸುತ್ತದೆ.
- ಪ್ರಶ್ನೆಪತ್ರಿಕೆ ತಯಾರಕರ ಸಮಿತಿಯ ಅಧ್ಯಕ್ಷರು, ಪ್ರಶ್ನೆಪತ್ರಿಕೆ ತಯಾರಕರು ಹಾಗೂ ಪರಿಶೀಲನಾ ಸಮಿತಿಯ ಸದಸ್ಯರುಗಳೆಲ್ಲರೂ ಈ ಘಟನೆಗೆ ನೇರವಾಗಿ ಜವಾಬ್ದಾರರಾಗಿರುವರೆಂದು ತಿಳಿದು, ಅವರೆಲ್ಲರಿಂದ ಈ ಎಲ್ಲಾ ನಷ್ಟವನ್ನು ಭರಿಸಲು ತಿಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಭಾಗಿಯಾದ ಎಲ್ಲರನ್ನೂ (ಅಧ್ಯಾಪಕರುಗಳನ್ನು) ಐದು (5) ವರ್ಷಗಳ ಕಾಲ ಕಪ್ಪುಪಟ್ಟಿಯಲ್ಲಿಡಲು (Black List) ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.
- ಪ್ರಶ್ನೆಪತ್ರಿಕೆಯನ್ನು ಡಿ.ಟಿ.ಪಿ. ಮಾಡಿದವರ ಮೇಲೆ ಸೂಕ್ತ ಕ್ರಮಕೈಗೊಳ್ಳಲು ಸಭೆ ಸೂಚಿಸುತ್ತದೆ. ಇನ್ನು ಮೇಲೆ ಪರೀಕ್ಷೆ ಹಾಗೂ ಪ್ರಶ್ನೆಪತ್ರಿಕೆಗಳನ್ನು ತಯಾರಿಸುವಾಗ ವಿಶ್ವವಿದ್ಯಾಲಯವು ಹೆಚ್ಚಿನ ಮುತುವರ್ಜಿಯನ್ನು ವಹಿಸಿ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಲು ಸಮಿತಿಯು ಸೂಚಿಸುತ್ತದೆ.

ನಿರ್ಣಯ: **ಸಭೆಯು ಸತ್ಯಶೋಧನ ಸಮಿತಿಯ ವರದಿಯ ಶಿಫಾರಸ್ಸನ್ನು ಚರ್ಚಿಸಿತು. ಸಮಿತಿಯ ವರದಿಯನ್ನು ಯಥಾವತ್ತಾಗಿ ಅನುಪಾಲನೆ ಮಾಡಲು ಸಭೆಯು ಅನುಮೋದಿಸಿತು.**

**ವಿಷಯ 3: ಆಯಾ ಶಾಸ್ತ್ರಭಾಗಗಳಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ನೀಡುವ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟಶ್ರೇಣಿ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ. 5000/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರವನ್ನು ನೀಡಬೇಕಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: 27.04.2013ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಿರ್ಣಯವನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸಭೆಯು ವಿವರಗಳನ್ನು ಪರಿಶೀಲಿಸಿ– ಆಯಾ ಶಾಸ್ತ್ರಭಾಗದಲ್ಲಿ ಕನಿಷ್ಠ ಐದು ವಿದ್ಯಾರ್ಥಿಗಳು ಪರೀಕ್ಷೆ ಬರೆದಿರಬೇಕು. ಅಂತಹ ಶಾಸ್ತ್ರಭಾಗದಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗೆ ಮಾತ್ರ ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ಹಾಗೂ ನಗದುಪುರಸ್ಕಾರವನ್ನು ನೀಡಲು ಸಭೆಯು ಅನುಮೋದನೆಯನ್ನು ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು